

## ‘ಎತ್ತರ’ದ ಖ್ಯಾತಿಯ ಮಲೇಷ್ಯಾ

ಪ್ರಪಂಚದ ಎರಡನೇ ಎತ್ತರದ ಕಟ್ಟಡ– ಮರ್ದೇಕ 118 –678.9 ಮೀ.
ಪ್ರಪಂಚದ ಎತ್ತರದ ಜೋಡಿ ಕಟ್ಟಡ– ಪೆಟ್ರೊನಾಸ್ 451.9 ಮೀ.
ಪ್ರಪಂಚದ 7ನೇ ಎತ್ತರದ ಗೋಪುರ ಕಟ್ಟಡ– ಕೌಲಾಲಂಪುರ ಟವರ್ 421 ಮೀ.
ಪ್ರಪಂಚದ ಎರಡನೇ ಎತ್ತರದ ಮುರುಗನ್ ಪ್ರತಿಮೆ–ಮುರುಗನ್ ಪ್ರತಿಮೆ 42.7 ಮೀ.

ಪಶ್ಚಿಮ ಏಷ್ಯಾದಲ್ಲಿರುವ ಮಲೇಷ್ಯಾ ಪ್ರಮುಖವಾಗಿ ಎರಡು ತುಂಡುಗಳಲ್ಲಿ ಹಂಚಿಕೊಂಡಿದೆ. ಪಶ್ಚಿಮ ಮಲೇಷ್ಯಾ ಹಾಗೂ ಪೂರ್ವ ಮಲೇಷ್ಯಾ ಎಂದಾಗಿದ್ದು, ಇವೆರಡನ್ನೂ ಸೀಳಿದಂತೆ ನಡುವೆ ದಕ್ಷಿಣ ಚೀನಾ ಸಮುದ್ರವಿದೆ. ಇವೆರಡರ ನಡುವೆ ನಾಲ್ನೂರು ಮೈಲಿನ ಅಂತರ. ಇದರೊಂದಿಗೆ, ಮಲೇಷ್ಯಾ ದೇಶವೊಂದೇ ಪ್ರತ್ಯೇಕವಾಗಿ 878 ದ್ವೀಪಗಳನ್ನು ಹೊಂದಿದೆ. ಶೇ. 40ರಷ್ಟು ಭೂಪ್ರದೇಶ ಹೊಂದಿರುವ ಪಶ್ಚಿಮ ಮಲೇಷ್ಯಾದಲ್ಲಿ ಶೇ. 80ರಷ್ಟು ಜನಸಂಖ್ಯೆ. ಮಲೇಷ್ಯಾದ ಒಟ್ಟು ಜನಸಂಖ್ಯೆ 3.35 ಕೋಟಿಯಷ್ಟೇ.

ಇವಿಷ್ಟು ಮಲೇಷ್ಯಾದ ಭೌಗೋಳಿಕ ವಿಶೇಷತೆಯಾದರೆ, ಬಿಳಿ ಮರಳಿನ ಕಡಲ ತೀರಗಳು, ಪ್ರಾಚೀನ ಮಳೆಕಾಡುಗಳು, ಸುಂದರವಾದ ದ್ವೀಪಗಳು, ಕಲ್ಲಿನ ಗುಹೆಗಳು ಈ ನೆಲದ ಸುಂದರ ಚಿತ್ರಗಳು.

ನಾವು ಭೇಟಿ ಕೊಟ್ಟ ರಾಜಧಾನಿ ಕೌಲಾಲಂಪುರ ಎರಡು ನದಿಗಳ ಸಂಗಮ ಪ್ರದೇಶದ ಕೆಸರು ನೆಲದಲ್ಲಿ ರೂಪುಗೊಂಡಿದ್ದು ಎನ್ನುತ್ತದೆ ಇತಿಹಾಸ. ಗೋಂಬಕ್, ಕ್ಲಾಂಗ್ ನದಿಗಳು ಸೇರುವ ಜಾಗದ ಈ ಪ್ರದೇಶದಲ್ಲಿ 1857ರಲ್ಲಿ ಕೌಲಾಲಂಪುರ ಕಟ್ಟಿರುವ ಕಥೆಯಿದೆ. 1999ರಲ್ಲಿ ಪ್ರಧಾನಮಂತ್ರಿ ಕಚೇರಿಯು ಇಲ್ಲಿಂದ 42 ಕಿ.ಮೀ. ದೂರದ ಪುತ್ರಜಯಕ್ಕೆ ಸ್ಥಳಾಂತರಗೊಂಡಿದೆ.

### ಸ್ವಚ್ಛ -ಸುಂದರ ನಗರ

ಮಲೇಷ್ಯಾ ಕಂಡ ನಮಗೆ ಮೊದಲು ಅಚ್ಚರಿ ಹುಟ್ಟಿಸಿದ್ದು ಅಲ್ಲಿನ ಸ್ವಚ್ಛತೆ. ವರ್ಷದ ಇನ್ನೂರು ದಿನಗಳು ಮಳೆ ಬಂದರೂ ರಸ್ತೆಗಳಲ್ಲಿ ಗುಂಡಿ ಬಿದ್ದಿಲ್ಲ. ಅಡ್ಡಾದಿಡ್ಡಿ ಕಾಮಗಾರಿ ನಡೆಸಿ, ಉಬ್ಬುತಗ್ಗುಗಳನ್ನು ಎಲ್ಲೂ ಮಾಡಿಲ್ಲ ಎಂಬುದೇ ನಮಗೆ ದೊಡ್ಡ ವಿಷಯವೆನಿಸಿತ್ತು.

ನಾವೆಲ್ಲ ನಾಲ್ಕು ದಿನ ಮಲೇಷ್ಯಾದ ಕೌಲಾಲಂಪುರ, ಬಟು ಗುಹೆ, ಜೆಂಟಿಂಗ್ ಹೈಲ್ಯಾಂಡ್ಸ್, ಪುತ್ರಜಯ ಮುಂತಾದ ಕಡೆ ಪ್ರಯಾಣ ಮಾಡಿದಾಗ ನಮಗ್ಯಾರಿಗೂ ದಾರಿಹೋಕರೇ ಕಾಣಸಿಗಲಿಲ್ಲ. ಯಾವ ವಾಹನಗಳೂ ಹಾರ್ನ್ ಮಾಡುತ್ತಿರಲಿಲ್ಲ. ಟ್ರಾಫಿಕ್ ಪೊಲೀಸ್ ನೋಡಲೇ ಇಲ್ಲವೆನ್ನಿ.

ದಾರಿಹೋಕರು ಇಲ್ಲದಿದ್ದಲ್ಲಿ ಜೀಬ್ರಾ ಕ್ರಾಸ್ ಯಾಕೆ? ಅಲ್ಲಿನ ಪೆಟ್ರೊನಾಸ್ ಅವಳಿ ಗೋಪುರದ ಬಳಿ ಟ್ರಾಫಿಕ್ ಸಿಗ್ನಲ್, ಜೀಬ್ರಾ ಕ್ರಾಸ್ ಕಂಡವರು ಮತ್ತೆ ಕಂಡದ್ದು ಭಾರತಕ್ಕೆ ಹಿಂದಿರುಗಿದಾಗಲೇ.

ಮಲೇಷ್ಯಾದಲ್ಲಿ ಸಾಗುತ್ತಿದ್ದಂತೆ ಪ್ರತಿಯೊಂದು ವಿಷಯದಲ್ಲೂ ನಮ್ಮ ಬೆಂಗಳೂರನ್ನು ಹೋಲಿಕೆ ಮಾಡಿಕೊಳ್ಳುತ್ತಿದ್ದೆವು. ರಸ್ತೆಗಳು ಸ್ವಚ್ಛ,


ಪ್ರಸಿದ್ಧ ಬಟು ಗುಹೆಗಳು